Literacy for a Billion

Movie: Muthanna
Year: 1994

Song: Nangu Ase Ningu Ase
Lyricist: Hamsalekha

ನಂಗೂ ಆಸೆ ನಿಂಗೂ ಆಸೆ
ಮೊದಲಿನಿಂದಲೂ
ನಂಗೂ ಬಿಂಕ ನಿಂಗೂ ಬಿಂಕ
ಆಗಿನಿಂದಲೂ
ಹೊರಗಡೆ ಹೇಳಲು ಒದ್ದಾಡಿದೆ
ಈಗ್ಯಾಕೋ ಮುದ್ದಾಡಿದೆ
ಮನಸನು ತಡೆವುದು ಸಾಕಾಗಿದೆ
ಈಗೇನೋ ಬೇಕಾಗಿದೆ
ಏರಿದೆ ಪ್ರಾಯದ ಗುಂಗು ಏರಿದೆ
ನಂಗೂ ಆಸೆ ನಿಂಗೂ ಆಸೆ
ಮೊದಲಿನಿಂದಲೂ
ನಂಗೂ ಬಿಂಕ ನಿಂಗೂ ಬಿಂಕ
ಆಗಿನಿಂದಲೂ
ಈ ಹೆಣ್ಣಲ್ಲಿ ಗುಟ್ಟು ನಿಲ್ಲದು
ಕಣ್ಣಲ್ಲಿ ಸುಳ್ಳು ಗೆಲ್ಲದು
ಕೆಳಗಿಳಿಯೋ ಮಿಂಚಿಗೆ
ಕರಿಮೋಡ ಅಡ್ಡವಾಗದು
ಈ ಗಂಡಲ್ಲಿ ಮಾತು ನಿಲ್ಲದು
ಕಣ್ಣಲ್ಲೆ ಕೊಲ್ಲ ಬಲ್ಲದು
ಎದೆಗಿಳಿಯೋ ಬಾಣವ
ಋತು ದೇಶ ಕಾಯಲಾರದೂ
ಅನುಮತಿ ಕೇಳಲು ಒದ್ದಾಡಿದೆ
ಈಗ್ಯಾಕೋ ಮುದ್ದಾಡಿದೆ
ವಿರಹವ ತಡೆವುದು ಸಾಕಾಗಿದೆ
ಈಗೇನೋ ಬೇಕಾಗಿದೆ
ಕಾದಿದೆ ಆಸೆಯ ಹೆಂಚು ಕಾದಿದೆ
ನಂಗೂ ಆಸೆ ನಿಂಗೂ ಆಸೆ
ಮೊದಲಿನಿಂದಲೂ
ನಂಗೂ ಬಿಂಕ ನಿಂಗೂ ಬಿಂಕ
ಆಗಿನಿಂದಲೂ
ಓ ನಾನೊಂದು ಪ್ರೇಮ ಪುಸ್ತಕ
ನೀನಿದರ ಧೀರನಾಯಕ
ತೆರೆದಿಟ್ಟ ನನ
ಪುಟವೆಲ್ಲ ನಿನಗಾಗೀ
ಈ ದಾಳಿಂಬೆ ಹೆಣ್ಣು ಕಿಲಕಿಲ
ರಸಪೂರಿ ಹೆಣ್ಣು ಘಮಘಮ
ಬರೆದಿಟ್ಟೆ ನನ
ಬದುಕೆಲ್ಲ ನಿನಗಾಗೀ
ಹೃದಯದ ಗಣಿತವು ಸಾಕಾಗಿದೆ
ಈಗೇನೋ ಬೇಕಾಗಿದೆ
ನಿಜವನು ಹೇಳಲು ಒದ್ದಾಡಿದೆ
ಈಗ್ಯಾಕೋ ಮುದ್ದಾಡಿದೆ
ಹಾಡಿದೆ ಪ್ರಣಯದ ಹಕ್ಕಿ ಹಾಡಿದೆ
ನಂಗೂ ಆಸೆ ನಿಂಗೂ ಆಸೆ

ಮೊದಲಿನಿಂದಲೂ ಆಗಿನಿಂದಲೂ

ನಂಗೂ ಬಿಂಕ ನಿಂಗೂ ಬಿಂಕ

Disclaimer: PlanetRead does not own these lyrics and is not using them for any commercial purpose. For over 20 years, PlanetRead has been subtitling Bollywood songs for mass literacy. These lyrics are being offered as part of PlanetRead's literacy development initiative.

PlanetRead is a tax-exempt, not-for-profit: 501(c) (3) in the United States and 80(G) in India.